ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಸಾಕ್ಷಿಗೆ ಒಂದು ಪತ್ರವನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿ ನಿಮ್ಮದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಈಗ ಹೇಳಲು ಆಗುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದ್ರಿ ದಾಖಲೆಯನ್ನು ನಿಶಾನೆಯನ್ನಾಗಿ ಮಾಡಿಲ್ಲ. ಅದೇ ರೀತಿ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿ ನಿಮ್ಮದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಈಗ ಹೇಳಲು ಆಗುವುದಿಲ್ಲ ಮತ್ತು ಒಂದನೇ ಪ್ರತಿವಾದಿ ನನ್ನ ಅಣ್ಣ ನಮ್ಮ ಸಹಿಯನ್ನು ಖಾಲಿ ಪೇಪರ್ ಗಳಿಗೆ ತೆಗೆದುಕೊಂಡಿರುತ್ತಾರೆ ಮತ್ತು ಅವರು ಕೂಡ ನಮ್ಮ ಸಹಿಯನ್ನು ಮಾಡುತಿದ್ದರು ಎಂದು ತಿಳಿಸಿರುತ್ತಾರೆ . ಒಂದನೇ ಪ್ರತಿವಾದಿ ನನ್ನ ಅಣ್ಣ ಖಾಲಿ ಪತ್ರಕ್ಕೆ ಸಹಿ ಪಡೆಯುತಿದ್ದರು ಎಂದು ನನ್ನ ವಾದಪತ್ರದಲ್ಲಿ ತಿಳಿಸಿಲ್ಲ ಆದರೇ ನಮ್ಮ ವಕೀಲರಿಗೆ ಹೇಳಿರುತ್ತೇನೆ. ನಮ್ಮ ಸಹಿಗಳನ್ನು ಒಂದನೇ ಪ್ರತಿವಾದಿ ನನ್ನ ಅಣ್ಣ ಫೋಜ್ರರಿ ಮಾಡುತಿದ್ದರು ಎಂದು ನಮ್ಮ ವಾದಪತ್ರದಲ್ಲಿ ತಿಳಿಸಿಲ್ಲ, ಆದರೇ ನಮ್ಮ ವಕೀಲರಿಗೆ ಹೇಳಿರುತ್ತೇನೆ. ನನ್ನ ಅಣ್ಣ 2 ನೇ ಪ್ರತಿವಾದಿ ಅವರು ಕೂಡ Consent and No Objection letter ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ತಿಳಿಸಿರುತ್ತಾರೆ . 19-03-2012 ರಂದು ನಾನು ಮತ್ತು 2 ನೇ ಪ್ರತಿವಾದಿ ಒಂದನೇ ಪ್ರತಿವಾದಿ ನನ್ನ ಅಣ್ಣನಿಗೆ ಜಂಟಿ ಹಕ್ಕಿನ ಆಸ್ತಿಗಳ ಕುರಿತು ಜಪಿಎ ನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ . ಸಾಕ್ಷಿ ಸದ್ರಿ ಜಿಪಿಎ ಯನ್ನು ಒಪ್ಪಿಕೊಂಡಿದ್ದು, ಅದನ್ನು ನಿಡಿ -21 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಇನ್ನೂ 4 ಜಿಪಿಎಯನ್ನು ಕೊಟ್ಟಿದ್ದೇವೆ ಅವರು ಸಹಿ ಹಾಕಲು ಹೇಳಿದರು ನಾವು ಹಾಕಿ ಕೊಟ್ಟಿರುತ್ತೇವೆ ಎಂದ ತಿಳಿಸಿರುತ್ತಾರೆ. 1 ನೇ ಪ್ರತಿವಾದಿ

ಸ್ದರಿ  ಜಿಪಿಎ ಯಂತೆ  ನಿಪಿ 100  ರಿಲೀಸ್ ಡೀಡ್ ನ್ನು ಮಾಡಿದ್ದಾರೆ ಎಂದರೆ ಸಾಕ್ಷಿ ನಾವು ಮಾಡಿಕೊಟ್ಟಿಲ್ಲ , ನಾವು ಜಿಪಿಎಯನ್ನು ರದ್ದುಗೊಳಿಸಿರುತ್ತೇವೆ ಮತ್ತು ಈ ಬಗ್ಗೆ ನೋಟಿಸು ಕೊಟ್ಟಿರುತ್ತೇವೆ ಮತ್ತು ಒಂದು ತಿಂಗಳ ಮೊದಲು ಬಾಯಿ ಮುಖೇನ ಹೇಳಿರುತ್ತೇವೆ ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರಿದು ನಾವು ಒಟ್ಟು 5 ಜಿಪಿಎಯನ್ನು 2 ನೊಂದಾಯಿತ ಜಿಪಿಎ ಮತ್ತು 3 ನೊಂದಾಯಿತ ಅಲ್ಲದ ಜಿಪಿಎಯನ್ನು  ರದ್ದುಗೊಳಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ನಾವು ಹಾಜರುಪಡಿಸಿರುವ ನಿಪಿ 100 ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಪಡೆದಂತಹ ಅಸಲಿನ ನಕಲು ಪ್ರತಿ ಎಂದರೆ ಸರಿ . ಸ್ದರಿ  ರಿಲೀಸ್ ಡೀಡ್ ನ್ನು ನಾವು ಅಸಿಂದು ಎಂದು ಘೋಷಿಸುವಂತೆ ಮತ್ತು ರದ್ದುಗೊಳಿಸಬೇಕು ಎಂದು ನಮ್ಮ ವ್ಯಾಜ್ಯದಲ್ಲಿ ಪರಿಹಾರ ಕೇಳಿಲ್ಲ ಎಂದರೆ ಸಾಕ್ಷಿ ನಾವು ರೀಲೀಸ್ ಮಾಡಿಕೊಟ್ಟಿಲ್ಲ ಎಂದು ತಿಳಿಸಿರುತ್ತಾರೆ.ರಿಲೀಸ್ ಪತ್ರದ ಆದಾರದಲ್ಲಿ ಐಟಂ ನಂ 1 ಮತ್ತು 2 ರ ಆಸ್ತಿಗೆ ಸಂಬಂದಪಟ್ಟಂತಹ  ಇ ಖಾತೆ ಆಗಿದೆ ಎಂದರೆ ಸಾಕ್ಷಿ  ಮೋಸ ಮಾಡಿ ನಾವು ಜಿಪಿಎಯನ್ನು ರದ್ದುಗೊಳಿಸಿದನಂತರ ರಿಲೀಸ್ ಡೀಡ್ ಮಾಡಿಕೊಂಡಿರುತ್ತಾರೆ  ಎಂದು ತಿಳಿಸಿರುತ್ತಾರೆ  ಮತ್ತು ರಿಲೀಸ್ ಡೀಡ್ ಮಾಡಿಕೊಂಡಿರುವ ಬಗ್ಗೆ ಪ್ರತಿವಾದಿ ಪ್ರತಿವಾದ ಪತ್ರ ಹಾಕಿದ ನಂತರವೇ ಗೊತ್ತಾಯಿತು ಎಂದು ತಿಳಿಸಿರುತ್ತಾರೆ . 2017 ರಲ್ಲಿ ರಿಲೀಸ್ ಡೀಡ್ ಆದ ನಂತರ ಮುನ್ಸಿಪಾಲಿಟಿ ಯವರು ಇ ಖಾತೆ ಮಾಡಿರುತಾರೆ ಎಂದರೆ ಸಾಕ್ಷಿ ನನಗೆ ಇಲ್ಲಿವರೆಗೆ ಗೊತಿರಲಿಲ್ಲ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಇ ಖಾತಾ ದ ಪ್ರತಿಯನ್ನು ತೋರಿಸಲಾಗಿ ಅದನ್ನು ನೋಡಿ ಸಾಕ್ಷಿ ಅದನ್ನು ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು  ತಿಳಿಸಿರುತ್ತಾರೆ . ಸ್ದರಿ ನಮೂನೆಯನ್ನು ನಿಡಿ 22 ಎಂದು ಗುರುತಿಸಲಾಯಿತು . ಐಟಂ ನಂ 1 ಮತ್ತು 2  ಖರೀಸುವ ಸಮಯದಲ್ಲಿ ಯಾವುದೇ ಕಾಂಪೌಂಡ್ ಇರಲಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರಿದು 2019

ರಲ್ಲಿ ನಾವು ಕಂಪೌಂಡ್ ಹಾಕಿಸಿರುತ್ತೇವೆ ಎಂದು ತಿಳಿಸಿರುತ್ತಾರೆ . 2017 ರಲ್ಲಿ ಒಂದನೇ ಪ್ರತಿವಾದಿ ಬಿ ಶೆಡೂಲ್ ಆಸ್ತಿಗೆ ಕಾಂಪೌಂಡ್ ಹಾಕಿಸುವ ಸಮಯದಲ್ಲಿ ಐಟಂ ನಂ. 1 ಮತ್ತು 2 ಆಸ್ತಿಗಳಿಗೂ ಕಾಂಪೌಂಡ್ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ . ಐಟಂ ನಂ 1 ಮತ್ತು 2 ಆಸ್ತಿಗೆ ಕಾಂಪೌಂಡ್ ಹಾಕಿಸಲು ಎಷ್ಟು ಖರ್ಚು ಆಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕಾಂಪೌಂಡ್ ಹಾಕಿದವನಿಗೆ ರೂ 50,000 ಕೊಡಲಾಗಿದೆ 1 ಲಕ್ಷ ಇನ್ನೂ ಕೂಡ ಬಾಕಿ ಇದೆ ಎಂದು ತಿಳಿಸಿರುತ್ತಾರೆ . ನಾವೆಲ್ಲರೂ ಸೇರಿ ಕಾಂಪೌಂಡ್ ಹಾಕಿಸಿರುತ್ತೇವೆ . ಅದರ ಲೆಕ್ಕಚಾರವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು . ನಾವು ಕಾಂಪೌಂಡ್ ವಾಲ್ ಕಟ್ಟುವಾಗಲೇ ನಾವು ಕೊಟ್ಟಿರುವ ಜಿಪಿಎಯನ್ನು ರದ್ದು ಮಾಡಿರುತ್ತೇವೆ . ಜಿಪಿಎಯನ್ನು ಏಕೆ ರದ್ದು ಮಾಡಿದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನ್ನ ತಾಯಿ ತೀರಿಕೊಂಡ ನಂತರ ಒಂದನೇ ಪ್ರತಿವಾದಿ ನನ್ನ ಅಣ್ಣನ ನಡವಳಿಕೆ ಸರಿ ಇರಲಿಲ್ಲ ಮತ್ತು ಸಾಲವನ್ನು ಪಡೆಯುವುದಾಗಿ ನನ್ನ ಮತ್ತೊಬ್ಬ ಸಹೋದರನಿಗೆ ಹೆದರಿಸುತಿದ್ದರು, ಆದ್ದರಿಂದ ಜಿಪಿಎಯನ್ನು ರದ್ದುಗೊಳಿಸಿರುತ್ತೇವೆ. ಜಿಪಿಎಯನ್ನು ರದ್ದುಗೊಳಿಸಿದ ನಂತರ ಕಾಂಪೌಂಡ್ ಹಾಕಿಸಲು ಒಂದನೇ ಪ್ರತಿವಾದಿ ನನ್ನ ಅಣ್ಣನೇ ಅದರ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತಿದ್ದ ಎಂದು ಹೇಳಲು ಕಾರಣ ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮನೆಯ ಹಣವೆಲ್ಲಾ ಆತನ ಬಳಿ ಇತ್ತು ಮತ್ತು ದಾಖಲೆ ಕೂಡ ಆತನ ಬಳಿಯೇ ಇತ್ತು ಎಂದು ತಿಳಿಸಿರುತ್ತಾರೆ . 2018 ರಲ್ಲಿ ನನ್ನ ಅಣ್ಣ ಐಟಂ ನಂ 1 ಮತ್ತು 2 ರ ಆಸ್ತಿಗಳಿಗೆ ಒಳಗೆ ಹೋಗುವಾಗ ಪ್ರಾರಂಭ ದಲ್ಲಿ ಮೆಟಲ್ ಗೇಟನ್ನು ಹಾಕಿಸಿದ್ದಾರೆ ಎಂದರೆ ಸಾಕ್ಷಿ ನಾವೆಲ್ಲರೂ ಸೇರಿ ಮನೆಯ ಹಣದಿಂದ ಹಾಕಿಸಿದ್ದೇವೆ ಎಂದು ತಿಳಿಸಿರುತ್ತಾರೆ. ಜಿಪಿಎಯನ್ನು ರದ್ದುಗೊಳಿಸಿದಾಗ ನಾನು ಹೇಳುವ ಮನೆಯ ಹಣದ ಲೆಕ್ಕಚಾರವನ್ನು ಕೇಳಿದೀರಾ ಎಂದು

ಕೇಳಿದ ಪ್ರಶ್ನೆಗೆ ಸಾಕ್ಷಿ ನಾವು ಕೇಳುತಿದ್ದೆವು ಮತ್ತು ಪಾಲು ಮಾಕೊಳ್ಳೋಣ ಎಂದು ಹೇಳುತಿದ್ದೆವು ಆದರೇ ಅವರು ಮಾಡೋಣ ಎಂದು ಮುಂದೆ ಹಾಕುತಿದ್ದರು ಎಂದು ತಿಳಿಸಿರುತ್ತಾರೆ . ಜಿಪಿಎಯನ್ನು ರದ್ದುಗೊಳಿಸುವಾಗ ನೋಟಿಸು ಕೊಟ್ಟು ಮನೆಯ ಹಣದ ಲೆಕ್ಕ ಕೊಡಿ ಎಂದು ಕೇಳಿಲ್ಲ ಆದರೇ ಬಾಯಿ ಮಾತಿನಲ್ಲಿ ಕೇಳುತಿದ್ದೆ . 2017 ರಲ್ಲಿ ಜಿಪಿಎಯನ್ನು ರದ್ದುಗೊಳಿಸುವಾಗ ನಿಮ್ಮ ಅಣ್ಣನ ಮೇಲೆ ನಂಬಿಕೆ ಇತ್ತಾ ಅಥವಾ ಹೋಗಿತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರ ನಡವಳಿಕೆ ಸರಿ ಇರಲಿಲ್ಲ, ಆದರೇ ಅವರ ಮಾತನ್ನು ಕೇಳುತ್ತಾ ಬರುತಿದ್ದೆವು ಕಾರಣ ಅವರ ಬಳಿ ಮನೆಯ ಹಣ ಆಸ್ತಿಗಳು ಇದ್ದವು ಎಂದು ತಿಳಿಸಿರುತಾರೆ . ನನ್ನ ಅಣ್ಣ ಐಟಂ 1 ಮತ್ತು 2 ರಲ್ಲಿ 2 ಕೋಣೆ ಕಟ್ಟಿಸಿದ್ದಾರೆ ಎಂದರೆ ಸಾಕ್ಷಿ ನಾವು ಎಲ್ಲರು ಸೇರಿ ಕಟ್ಟಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಅದಕ್ಕೆ ಮೇಲ್ಚಾವಣಿ ಹಾಕಿರಲಿಲ್ಲ . ಸದ್ರಿ ಕೋಣೆಗಳನ್ನು ಕಟ್ಟಲು ನನ್ನ ಒಪ್ಪಿಗೆ ಇತ್ತು. ಅರ್ಧ ಆಗಿದ್ದ ಕಟ್ಟಡದಿಂದ ಐಟಂ 1 ಮತ್ತು 2 ರ ಆಸ್ತಿಗೆ ಏನಾದರೂ ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತೊಂದರೆ ಆಗುವುದು ಬೇಡ ಎಂದು ನಾವು ಹೇಳಿ ನಿಲ್ಲಿಸಿದೆವು ಎಂದು ತಿಳಿಸಿರುತ್ತಾರೆ. ನಾವೆ ಮೇಸ್ತ್ರಿಗೆ ಹೇಳಿ ಕೆಲಸ ಮಾಡುವುದು ಬೇಡ ಎಂದು ಹೇಳಿ ನಿಲ್ಲಿಸಿದೆವು . ನಮ್ಮ ವಾದಪತ್ರದಲ್ಲಿ ಐಟಂ 1 ಮತ್ತು 2 ಆಸ್ತಿಯಲ್ಲಿ ನಮ್ಮ ಒಪ್ಪಿಗೆ ಇಲ್ಲದೇ ಒಂದನೇ ಪ್ರತಿವಾದಿ ನನ್ನ ಅಣ್ಣ ಕಟ್ಟಡ ಕಟ್ಟುವ ಹುನ್ನಾರದಲ್ಲಿ ಇದ್ದಾರೆ ಎಂದು ಹೇಳಿಲ್ಲ. ಆದರೇ ವಕೀಲರ ಬಳಿ ಹೇಳಿರುತ್ತೇವೆ. ಐಟಂ 1 ಮತ್ತು 2 ರ ಆಸ್ತಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರು ಕಟ್ಟಡ ಕಟ್ಟಿಸುವ ಹುನ್ನಾರದಲ್ಲಿ ಇದ್ದಾರೆ ಎಂದು ನಮ್ಮ ವಾದಪತ್ರದಲ್ಲಿ ಹೇಳಿಲ್ಲ. ಆದರೇ ನಮ್ಮ ವಕೀಲರ ಬಳಿ ಹೇಳಿರುತ್ತೇವೆ. ಈ ನ್ಯಾಯಲಯದಿಂದ ನಿರ್ಬಂದಕಾಜ್ಞೆ ಪಡೆದಿದ್ದರಿಂದ 1 ನೇ ಪ್ರತಿವಾದಿ ಕಟ್ಟಡವನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು ಎಂದರೆ ಸರಿಯಲ್ಲ .

ಕಟ್ಟಡ ಕಟ್ಟದೇ ಗೋಡೆ ಶಿಥಿಲಾವಸ್ಥೆಯಲ್ಲಿ ಇದೆ ಅಲ್ಲವೇ ಎಂದು ಪ್ರಶ್ನೆ ಕೇಳಿರುತ್ತಾರೆ. ಸದ್ರಿ ಪ್ರಶ್ನೆ ಈ ದಾವೆಯನ್ನು ತೀರ್ಮಾನಿಸಲು ಸಮಂಜಶ ಇಲ್ಲದೇ ಇರುವುದರಿಂದ ಈ ಪ್ರಶ್ನೆಯನ್ನು ತಿರಸ್ಕರಿಸಲಾಗಿದೆ .

ಒ.ಎಸ್. - 34/2020

ಪಿ.ಡಬ್ಲ್ಯು - 01

ಸದ್ರಿ ಐಟಂ ನಂ 1 ಮತ್ತು 2 ರ ಸ್ವತ್ತಿನಲ್ಲಿ ಒಂದನೇ ಪ್ರತಿವಾದಿ ನನ್ನ ಅಣ್ಣ ಭಾವಿ ತೆಗೆಸಿರುತ್ತಾರೆ ಅಲ್ಲವೇ ಎಂದು ಪ್ರಶ್ನಿಸಿರುತ್ತಾರೆ. ಸದ್ರಿ ಪ್ರಶ್ನೆ ಕೂಡ ಈ ದಾವೆಯನ್ನು ತೀರ್ಮಾನಿಸಲು ಸಮಂಜಶ ಆಗಿರುವುದಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ತಿರಸ್ಕರಿಸಲಾಗಿದೆ .

ಐಟಂ ನಂ 1 ಮತ್ತು 2 ರ ಸಂಬಂದಪಟ್ಟಂತೆ ಕಂದಾಯ ತೆರಿಗೆ ಯನ್ನು ಒಂದನೇ ಪ್ರತಿವಾದಿ ನಿಮ್ಮ ಅಣ್ಣ ಪಾವತಿಸಿಕೊಂಡು ಬಂದಿರುತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರೇ ನೋಡಿಕೊಳ್ಳುತಿದ್ದರು ಅವರೇ ಕಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ .

ಐಟಂ ನಂ 1 ಮತ್ತು 2 ರ ಆಸ್ತಿಯನ್ನು ಆ್ಯಕ್ಸಿಸ್ ಬ್ಯಾಂಕ್ ಗೆ ಅಡಮಾಣ ಮಾಡಿ ಒಂದನೇ ಪ್ರತಿವಾದಿ ಮತ್ತು ಅವರ ಹೆಂಡತಿ ಸಾಲ ಪಡೆದಿರುತಾರೆ ಎಂದರೆ ಸಾಕ್ಷಿ ಕೇಸು ಹಾಕುವವರೆಗೆ ನಮಗೆ ಗೊತ್ತಿರಲಿಲ್ಲ, ಹಾಕಿದ ನಂತರ ಗೊತ್ತಾಯಿತು . ಈ ಬಗ್ಗೆ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಇದೇ ಮೊದಲ ಬಾರಿಗೆ ನೋಡುತಿದ್ದೇನೆ ಎಂದು ತಿಳಿಸಿದ ಮೇರೆಗೆ ಅದನ್ನು ನಿಡಿ 23 ಎಂದು ಗುರುತಿಸಲಾಯಿತು. ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ಐಟಂ ನಂ 1 ಮತ್ತು 2 ಗೆ ಸಂಬಂದಪಟ್ಟಂತೆ EC ನ್ನು ನಾನು ತೆಗೆದುಕೊಂಡಿಲ್ಲ. ಐಟಂ ನಂ 1 ಮತ್ತು 2 ಆಸ್ತಿಗೆ ಸಂಬಂದಪಟ್ಟಂತೆ ಕಂದಾಯ ದಾಖಲೆಗಳು ಒಂದನೇ ಪ್ರತಿವಾದಿ ನನ್ನ ಅಣ್ಣನ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಮೋಸ ಮಾಡಿ ಮಾಡಿಕೊಂಡಿರುತ್ತಾರೆ . ಜಿಪಿಎ ರದ್ದುಗೊಂಡ ನಂತರ ಮಾಡಿರುತ್ತಾರೆ. ಆ ರೀತಿ ಮೋಸ ಮಾಡಿ ಮಾಡಿಕೊಂಡಿದ್ದಾರೆ ಎಂದು ನಮ್ಮ ವಾದಪತ್ರದಲ್ಲಿ ಕಾಣಿಸಿಲ್ಲ. ಐಟಂ ನಂ 1 ಮತ್ತು 2 ರ ಆಸ್ತಿಗಳು ಒಂದನೇ ಪ್ರತಿವಾದಿ ನನ್ನ ಅಣ್ಣ ಸ್ವಂತ ಹಕ್ಕಿನ ಆಸ್ತಿ ಎಂದರೆ ಸರಿಯಲ್ಲ. ಐಟಂ ನಂ 1 ಮತ್ತು 2 ರ ಸ್ವತ್ತಿನಲ್ಲಿ ನನಗೆ ಹಕ್ಕು ವಗೈರೆ ಇರುವುದಿಲ್ಲ ಎಂದರೆ ಸರಿಯಲ್ಲ . ದಾವೆ ಹಾಕಿದ ನಂತರ ನಾನು ಐಟಂ ನಂ 1 ಮತ್ತು 2 ರ ಸ್ವತ್ತಿಗೆ ಸಂಬಂದಪಟ್ಟಂತೆ EC ಯನ್ನು ಪಡೆದಿಲ್ಲ .

ಐಟಂ ನಂ 6 ಅಪಾರ್ಟ್ಮೆಂಟ್ ಇರುವ ಜಾಗವನ್ನು 2007 ರಲ್ಲಿ ಖರೀದಿಸಲಾಗಿದೆ. ನಿಪಿ 67 ರ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ . ನಿಪಿ 67 ರಲ್ಲಿ ಇರುವ ಎಲ್ಲಾ ಅಂಶಗಳು ಸರಿ ಇರುತ್ತದೆ ಆದರೇ ಅದರಲ್ಲಿ ಕಾಣಿಸಿರುವ ಹಣದ ಮೊತ್ತ ಮಾತ್ರ ಸರಿ ಇರುವುದಿಲ್ಲ . ಐಟಂ ನಂ 6

ರ ಸ್ವತ್ತಿಗೆ ಸಂಬಂದಪಟ್ಟಂತೆ ತಲಾ 8 ಲಕ್ಷದಂತೆ 7 ಡಿಡಿಗಳನು ಒಂದನೇ ಪ್ರತಿವಾದಿ ಆತನ ಆ್ಯಕ್ಸಿಸ್ ಬ್ಯಾಂಕ್ ಖಾತೆ ಮೂಲಕ ಪಾವತಿಸಿದ್ದಾರೆ ಎಂದರೆ ಸಾಕ್ಷಿ ಮನೆಯ ಹಣದಿಂದ ಪಾವತಿಸಿದ್ದಾರೆ ಎಂದು ತಿಳಿಸಿ, ಒಂದನೇ ಪ್ರತಿವಾದಿ ನನ್ನ ಅಣ್ಣನ ಖಾತೆ ಮೂಲಕ ಪಾವತಿಸಲಾಗಿದೆ ಎಂದು ತಿಳಿಸಿರುತ್ತಾರೆ . ಮನೆಯ ಹಣದಿಂದ ಪಾವತಿಸಲಾಗಿದೆ ಎಂದು ನೀವು ಹೇಳುತಿದ್ದು ಆ ಸಮಯದಲ್ಲಿ ಎಷ್ಟು ಮನೆಯ ಹಣಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಆ ಸಮಯದಲ್ಲಿ ಲೆಕ್ಕ ನೋಡಲಿಲ್ಲ ಮತ್ತು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ಒಂದನೇ ಪ್ರತಿವಾದಿ ನನ್ನ ಅಣ್ಣ ಆ್ಯಕ್ಸಿಸ್ ಬ್ಯಾಂಕ್ ಗೆ 56 ಲಕ್ಷ ಹೇಗೆ ಬಂದಿತು ಎಂದು ಐಟಿ ರಿಟನ್ಸ್ ನಲ್ಲಿ ಕಾಣಿಸಿದ್ದಾರೆ ಎಂದರೆ ಸಾಕ್ಷಿ ಒಂದನೇ ಪ್ರತಿವಾದಿ ನನ್ನ ಅಣ್ಣ ಅವರ ಬೇಕಾದ ರೀತಿ ದಾಖಲೆ ತಯಾರಿಸಿದ್ದಾರೆ ಮತ್ತು ಕಾಣಿಸಿದ್ದಾರೆ ಎಂದು ತಿಳಿಸಿರುತ್ತಾರೆ . ಮನೆಯ ಹಣದಿಂದ ಪಾವತಿಸಲಾಗಿದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ ಆದರೇ ಭೂವಿಯನ್ನು ಖರೀದಿಸಿದ್ದೆ ನಮ್ಮ ಮನೆಯ ಹಣದಿಂದ ಮತ್ತು ಬೇರೆ ಯಾವುದೇ ಹಣ ಇರಲಿಲ್ಲ ಎಂದು ತಿಳಿಸಿರುತಾರೆ . ಐಟಂ ನಂ 6 ಆಸ್ತಿಯ ಖರೀದಿಗೆ ಸಂಬಂದಪಟ್ಟಂತೆ ನನ್ನ ಖಾತೆಯಿಂದ ಎಷ್ಟು ಹಣ ಪಾವತಿಸಲಾಗಿದೆ ಎಂದು ಆದಾಯ ತೆರಿಗೆ ಇಲಾಖೆಗೆ ಸಲ್ಲಿಸಿದ ರಿಟನ್ಸ್ ನಲ್ಲಿ ಕಾಣಿಸಲಾಗಿದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಲು ಹೋಗಲಿಲ್ಲ ಎಂದು ತಿಳಿಸಿರುತ್ತಾರೆ . ಆ ಜಾಗದ ಖಾತೆ ನಂ 176. ಆ ಜಾಗದ ಪಕ್ಕದ ಜಾಗ ಮಹಮ್ಮದ್ ಫಯಾಜ್ ಮತ್ತು ಇತರರಿಗೆ ಸೇರಿದೆ ಎಂದರೆ ಸರಿ . ಈ ಎರಡೂ ಜಾಗವನ್ನು ಸೇರಿಸಿ ಮಹಮ್ಮದ್ ಫಯಾಜ್ , ರಾಜೇಂದ್ರ ಕೊಡ್ಗಿ ಮತ್ತು ಇತರರು Partnership firm ಮಾಡಿಕೊಂಡರು ಎಂದರೆ ಸರಿ . ಸದ್ರಿ Partnership firm ಅಡಿಯಲ್ಲಿ ಜೊತೆಯಾಗಿ ಒಂದು ದೊಡ್ಡ ಅಪಾರ್ಟ್ ಮೆಂಟ್ ಕಟ್ಟಲಾಯಿತು ಎಂದರೆ ಸರಿ. 08-07-2010 ರಲ್ಲಿ ಮಹಮ್ಮದ್ ಫಯಾಜ್, ರೇಶ್ಮಾ ಫಯಾಜ್ , ರಾಜೇಂದ್ರ ಕೊಡ್ಗಿ , ನಂದಾಗೋಪಾಲ ಕೊಡ್ಗಿ ಮತ್ತು ಸುದೀರ್ ಕೊಡ್ಗಿ ಸೇರಿ ಒಂದು ವಿಭಾಗ ಪತ್ರ ಮಾಡಿಕೊಳ್ಳಲಾಯಿತು ಎಂದರೆ ಸರಿ . ಸಾಕ್ಷಿಗೆಈ ಬಗ್ಗೆ ವಿಭಾಗಪತ್ರ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಇದೇ ಮೊದಲ

ಬಾರಿಗೆ ನೋಡುತ್ತಿರುವುದಾಗಿ ತಿಳಿಸಿರುತ್ತಾರೆ . ಸಾಕ್ಷಿ ಮುಂದು ಒಂದನೇ ಪ್ರತಿವಾದಿ ನನ್ನ ಅಣ್ಣ ನಮಗೆ ಯಾವುದೇ ದಾಖಲೆಯನ್ನು ತೋರಿಸುತ್ತಿರಲಿಲ್ಲ ಬರೀ ಸಹಿ ಮಾತ್ರ ಮಾಡಿಕೊಡುವಂತೆ ಹೇಳುತಿದ್ದರು ಎಂದು ತಿಳಿಸಿರುತ್ತಾರೆ. ಅದೇ ದಿನ Dissolution Deed ಮಾಡಿಕೊಳ್ಳಲಾಗಿತ್ತು ನಾನು ಕೂಡ ಭಾಗವಹಿಸಿದ್ದೇನೆ ಎಂದರೆ ನೆನಪಿಲ್ಲ. ವಿಭಾಗಪತ್ರದಲ್ಲಿ ಕಾಣಿಸಿದ ಬಿ ಶೆಡೂಲ್ ನ್ನು ನಮಗೆ ಕೊಡಲಾಗಿದೆ ಎಂದರೆ ಸರಿ. ಆ ಪೈಕಿ 4 Flat ಗಳು ಮತ್ತು 1 portion ನ ಪೆಂಟ್ ಹೌಸ್ ಮಾರಾಟವಾಗಿದೆ ಎಂದರೆ ಸರಿ. ಆ ರೀತಿ ಮಾರಾಟವಾದ ಬಗ್ಗೆ ನಿಪಿ 68 ರಿಂದ 72 ಕ್ರಯಪತ್ರಗಳು ಎಂದರೆ ಸರಿ . ಪ್ರತಿ ಕ್ರಯಪತ್ರಗಳ ಹಣ ನನ್ನ ಖಾತೆಗೆ ಚೆಕ್ ಮೂಲಕ ವರ್ಗಾವಣೆ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ. ಸಾಕ್ಷಿಗೆ ಒಂದು ಚಲನ್ ಕೌಂಟರ್ ಫೈಲ್ ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಇದೇ ಮೊದಲ ಬಾರಿಗೆ ನೋಡುತಿದ್ದೇನೆ ಎಂದು ತಿಳಿಸಿರುತಾರೆ. ಸದ್ರಿ ಕೌಂಟರ್ ಫೈಲ್ ನ್ನು ನಿಡಿ 24 ಎಂದು ಗುರುತಿಸಲಾಯಿತು .ಸದ್ರಿ Apartment ನಲ್ಲಿ ಉಳಿದಿರುವ ಐಟಂ ನಂ 6 ರ Flat ನಲ್ಲಿ ಒಂದನೇ ಪ್ರತಿವಾದಿ ನನ್ನ ಅಣ್ಣ ಮತ್ತು ಅವರ ಹೆಂಡತಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ 2021 ರ ನಂತರ ವಾಸವಾಗಿದ್ದಾರೆ ಕಟ್ಟಿದಾಗಿನಿಂದ ವಾಸವಾಗಿರಲಿಲ್ಲ ಎಂದು ತಿಳಿಸಿರುತ್ತಾರೆ. ವಾಸದ ದಾಖಲೆಗಳು ಐಟಂ ನಂ 6 ರ ವಿಳಾಸದಲ್ಲಿಯೇ ಇದೆ ಎಂದರೆ ನನಗೆ ಗೊತ್ತಿಲ್ಲ . ಸದ್ರಿ Apartment ಕಟ್ಟಲು ಎಷ್ಟು ಹಣ ಖರ್ಚಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಜಾಗ ಖರೀದಿಸಲು 1 ಕೋಟಿ 6 ಲಕ್ಷ ಜಾಗಕ್ಕೆ ಖರ್ಚಾಗಿದೆ ಮತ್ತು ಕಟ್ಟಲು 1 ಕೋಟಿ 94 ಲಕ್ಷ ಖರ್ಚಾಗಿದೆ ಒಟ್ಟು 3 ಕೋಟಿ ಖರ್ಚಾಗಿದೆ ಎಂದು ತಿಳಿಸಿರುತ್ತಾರೆ. 1 ಕೋಟಿ 6 ಲಕ್ಷಕ್ಕೆ ಸದ್ರಿ ಜಾಗವನ್ನು ಖರೀದಿಸಲಾಗಿದೆ ಎನ್ನುವ ಬಗ್ಗೆ ದಾಖಲೆ ಇಲ್ಲ. ಸಾಕ್ಷಿ ಮುಂದುವರಿದು ನಾನೇ 50 ಲಕ್ಷ ಹಣವನ್ನು ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ ಎಂದು ತಿಳಿಸಿರುತ್ತಾರೆ . ಸಾಕ್ಷಿ ಮುಂದುವರಿದು ಅದು ಕಾಮರಾಜ ರಸ್ತೆ

ಬೆಂಗಳೂರಿನಲ್ಲಿ ಇರುತ್ತದೆ ಎಂದು ತಿಳಿಸಿರುತ್ತಾರೆ . ನಾನು ಮನೆಯಿಂದ ನಗದು 50 ಲಕ್ಷ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ . ಜಾಗವನ್ನು 1 ಕೋಟಿ 6 ಲಕ್ಷಕ್ಕೆ ಖರೀದಿಸಲಾಗಿದೆ ಎಂದು ನಮ್ಮ ವಾದಪತ್ರದಲ್ಲಿ ಹೇಳಿಲ್ಲ ನಮ್ಮ ವಕೀಲರಿಗೆ ಹೇಳಿರುತ್ತೇನೆ. ಬಿಲ್ಡಿಂಗ್ ಯಾರಿಂದ ಕಟ್ಟಿಸಲಾಗಿದೆ ಮತ್ತು ಎಷ್ಟು ಖರ್ಚಾಯಿತು ಎನ್ನುವ ಬಗ್ಗೆ ಗೊತ್ತು . ಇಂಜಿನಿಯರ್ ರಾಘವೇಂದ್ರ, ಉಡುಪಿಯ ಮತ್ತೊಬ್ಬ ಗೋಪಾಲ್ ಭಟ್ ಎನ್ನುವ ಇಂಜಿನಿಯರ್ ಇದ್ದರು ಎಂದು ತಿಳಿಸಿರುತ್ತಾರೆ . ಎಲ್ಲಾ ಲೆಕ್ಕಚಾರವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಂಡಿರುತ್ತಾನೆ . 1 ಕೋಟಿ 94 ಲಕ್ಷ ಹಣ ಖರ್ಚಾದ ಬಗ್ಗೆ ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬಿಲ್ಡಿಂಗ್ ಕಟ್ಟಿರುವುದೇ ದಾಖಲೆ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಒಂದು Consent ಪತ್ರ ತೋರಿಸಲಾಗಿ ಸಾಕ್ಷಿ ನಾನು ಯಾವುದೇ Consent ಕೊಟ್ಟಿಲ್ಲ ಫೋಜ್ರರಿ ಮಾಡಿರುತಾರೆ ಎಂದು ತಿಳಿಸಿ, ಜಿಪಿಎಯನ್ನು ರದ್ದುಗೊಳಿಸಿದ ನಂತರ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ . ಐಟಂ ನಂ 6 ರಕ್ಕೆ ಸಂಬಂದಪಟ್ಟಂತೆ ಬಿಬಿಎಂಪಿ ಖಾತಾ ಒಂದನೇ ಪ್ರತಿವಾದಿ ನನ್ನ ಅಣ್ಣನ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ . ಐಟಂ ನಂ 6 ರಕ್ಕೆ ಸಂಬಂದಪಟ್ಟಂತೆ ಬಿಬಿಎಂಪಿ ಗೆ Building Tax ಮತ್ತು ಇತರೇ ಕಂದಾಯಗಳನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಮನೆಯ ಹಣದಿಂದ ಕಟ್ಟಿದ್ದಾರೆ ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಕಂದಾಯ ಪಾವತಿ ರಸೀದಿಂಯನ್ನು ತೋರಿಸಿದಾಗ ಸಾಕ್ಷಿ ಇದೇ ಮೊದಲ ಬಾರಿಗೆ ನೋಡುತಿದ್ದೇನೆ ಎಂದು ತಿಳಿಸಿರುತ್ತಾರೆ . ಸದ್ರಿ ದಾಖಲೆಯನ್ನು ನಿಡಿ 25 ಎಂದು ಗುರುತಿಸಲಾಯಿತು . ಸಾಕ್ಷಿಗೆ ಇ ಖಾತಾಗಳನ್ನು ತೋರೀಸಲಾಗಿ ಸಾಕ್ಷಿ ಇದೇ ಮೊದಲ ಬಾರಿಗೆ ನೋಡುತಿದ್ದೇನೆ ಎಂದು ತಿಳಿಸಿರುತ್ತಾರೆ. ಅದನ್ನು ನಿಡಿ 26 ಮತ್ತು 27 ಎಂದು

ಗುರುತಿಸಲಾಯಿತು . ಐಟಂ ನಂ 6 ರ ಆಸ್ತಿ ಖರೀದಿ ಸಂಬಂಧ ಜಿಪಿಎ ಆಗಿದೆ ಎಂದು ಸಾಕ್ಷಿಗೆ ಜಿಪಿಎಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ 2 ನೇ ಪ್ರತಿವಾದಿ ನನ್ನ ಸಹೋದರ ಕೊಟ್ಟಿರುತ್ತಾರೆ ಎಂದು ಒಪ್ಪಿಕೊಂಡಿರುತ್ತಾರೆ. ಸದ್ರಿ ದಾಖಲೆಯನ್ನು ನಿಡಿ 28 ಎಂದು ಗುರುತಿಸಲಾಯಿತು. ಅದನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ಮಾಡಿಸಿರುತ್ತಾರೆ ನಾವು ಸಹ ಮಾತ್ರ ಮಾಡಿರುತ್ತೇವೆ ಎಂದು ತಿಳಿಸಿರುತ್ತಾರೆ. ನಿಪಿ 67 ಕ್ರಯಪತ್ರವನ್ನು ನಂದಾಗೊಪಾಲ್ ಕೊಡ್ಗಿ ಪರವಾಗಿ ನಾನು ಬರೆಯಿಸಿಕೊಂಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ . ಸದ್ರಿ ಅಪಾರ್ಟ್ ಮೆಂಟ್ ನ ಸಂಬಂಧವಾಗಿ ನಿಡಿ 21 ರ ಪ್ರಕಾರ ನಾವು ಒಂದನೇ ಪ್ರತಿವಾದಿ ನನ್ನ ಅಣ್ಣನಿಗೆ ಜಿಪಿಎ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ಕೂಡ ರದ್ದುಗೊಳಿಸಿದ್ದೇವೆ ಎಂದು ತಿಳಿಸಿರುತ್ತಾರೆ . ಸದ್ರಿ ಜಿಪಿಎ ಯ ಆದಾರದಲ್ಲಿ ಐಟಂ ನಂ 6 ಅಪಾರ್ಟ್ ಮೆಂಟ್ ಗೆ ಸಂಬಂದಪಟ್ಟಂತೆ ರಿಲೀಸ್ ಡೀಡ್ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಯಾವುದೇ ರಿಲೀಸ್ ಡೀಡ್ ಮಾಡಿಕೊಟ್ಟಿಲ್ಲ ಅವರೇ ಮೋಸ ಮಾಡಿ ಜಿಪಿಎ ರದ್ದುಗೊಳಿಸಿದ ನಂತರ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ .

ಸದ್ರಿ ರಿಲೀಸ್ ಡೀಡ್ ಅಸಿಂದು ಎಂದು ಏಕೆ ಪರಿಹಾರ ಕೇಳಿಲ್ಲ ಎಂದರೆ ಸಾಕ್ಷಿ ರಿಲೀಸ್ ಡೀಡ್ ನ್ನೇ ಕೊಟ್ಟಿಲ್ಲ . ಆದ್ದರಿಂದ ಕೇಳುವ ಪ್ರಮೇಯವೇ ಇಲ್ಲ ಎಂದು ತಿಳಿಸಿರುತ್ತಾರೆ . ನಿಪಿ 73 ರಿಲೀಸ್ ಡೀಡ್ ನ ಪ್ರತಿಯನ್ನು ನಾನು ಸಬ್ ರಿಜಿಸ್ಟ್ರಾರ್ ಕಚೇರಿಯಿಂದ ಪಡೆದು ತಂದು ಹಾಜರುಪಡಿಸಿದ್ದೇನೆ ಎಂದರೆ ಸರಿ . ಐಟಂ ನಂ 6 ಕ್ಕೆ ಸಂಬಂದಪಟ್ಟ ಎಲ್ಲ ಕಂದಾಯ ದಾಖಲೆಗಳು ಒಂದನೇ ಪ್ರತಿವಾದಿ ನನ್ನ ಅಣ್ಣನ ಹೆಸರಿಗೆ ಇದೆ ಎಂದರೆ ಸಾಕ್ಷಿ 2020 ರವರೆಗೆ ನನಗೆ ಗೊತಿರಲಿಲ್ಲ. ಈ ದಾವೆ ಹಾಕಿದ ನಂತರ ಪ್ರತಿವಾದ ಪತ್ರ ಹಾಕಿದ ನಂತರ ಗೊತ್ತಾಯಿತು ಎಂದು ತಿಳಿಸಿರುತ್ತಾರೆ . ನಾನು ಐಟಂ ನಂ 6 ರ ಸ್ವತ್ತಿಗೆ ಸಂಬಂದಪಟ್ಟಂತೆ ತೆರಿಗೆ ಪಾವತಿ ಮಾಡಿಲ್ಲ . ನಾನು ಐಟಂ ನಂ 6 ರ ಸ್ವತ್ತಿಗೆ ಸಂಬಂದಪಟ್ಟ ದಾಖಲತಿಗಳನ್ನು ನಾನು ಸಂಬಂದಪಟ್ಟ

ಇಲಾಖೆಯಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ನಾವು ಈ ಕೇಸನ್ನೇ ಹಾಕಿರುತ್ತೇವೆ ಎಂದು ತಿಳಿಸಿರುತಾರೆ .ಐಟಂ ನಂ 6 ರ ಸ್ವತ್ತಿಗೆ ಸಂಬಂದಪಟ್ಟಂತೆ Maintenance expenses ನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ಪಾವತಿಸುತಿದ್ದಾರೆ ಎಂದರೆ ಸರಿಯಲ್ಲ . ನೀವು Maintenance expenses ಪಾವತಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ . ಐಟಂ ನಂ 6 ರ ಸ್ವತ್ತಿಗೆ ಸಂಬಂದಪಟ್ಟಂತೆ Lift ನ್ನು ಕೂಡ ಒಂದನೇ ಪ್ರತಿವಾದಿ ನನ್ನ ಅಣ್ಣನೇ ರಿಪೇರಿ ಮಾಡಿಸಿರುತಾರೆಎಂದರೆ ಸಾಕ್ಷಿ ಮನೆಯ ಹಣದಿಂದ ಮಾಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ . ಐಟಂ ನಂ 6 ರ ಸ್ವತ್ತಿಗೆ ಸಂಬಂದಪಟ್ಟಂತೆ ವಿದ್ಯುತ್ ಸಂಪರ್ಕ ಮತ್ತು ಇತರೇ ಎಲ್ಲವನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ಮಾಡಿಸಿರುತಾರೆ ಎಂದರೆ ಸರಿಯಲ್ಲ. ಐಟಂ ನಂ 6 ರ ಸ್ವತ್ತಿಗೆ ಸಂಬಂದಪಟ್ಟಂತೆ ಎಲ್ಲ ಉಸ್ತುವಾರಿ ಮತ್ತು ಸ್ವತ್ತನ್ನು ಒಂದನೇ ಪ್ರತಿವಾದಿ ನನ್ನ ಅಣ್ಣನೇ ನೋಡಿಕೊಳ್ಳುತಿದ್ದಾರೆ ಎಂದರೆ ಸಾಕ್ಷಿ ನಮ್ಮ ಪರವಾಗಿ ನೋಡಿಕೊಳ್ಳುತಿದ್ದಾರೆ . ಐಟಂ ನಂ 6 ರ ಸ್ವತ್ತು ನಮ್ಮ ಜಂಟೀ ಸ್ವಾಧೀನದಲ್ಲಿ ಇದೆ ಎನ್ನುವ ಬಗ್ಗೆ ದಾಖಲೆ ಇಲ್ಲಆದರೇ ಅವರು ನಾವು ಜಿಪಿಎಯನ್ನು ರದ್ದುಗೊಳಿಸಿದ ನಂತರ ಮೋಸ ಮಾಡಿ ರಿಲೀಸ್ ಡೀಡ್ ಮಾಡಿಕೊಂಡಿರುತಾರೆ ಎಂದು ತಿಳಿಸಿರುತ್ತಾರೆ . ರಿಲೀಸ್ ಡೀಡ್ ಆದಾರದಲ್ಲಿ ಒಂದನೇ ಪ್ರತಿವಾದಿ ನನ್ನ ಅಣ್ಣನೇ ಐಟಂ ನಂ 6 ರ ಸ್ವತ್ತಿಗೆ ಮಾಲೀಕರಾಗಿರುತಾರೆ ಎಂದರೆ ಸರಿಯಲ್ಲ. ಐಟಂ ನಂ 6 ರ ಸ್ವತ್ತಿನಲ್ಲಿ ನಮಗೆ ಹಕ್ಕು ವಗೈರೆ ಭಾಗವಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಒ.ಎಸ್.  - 34/2020

ಪಿ.ಡಬ್ಲ್ಯು - 01

ಪ್ರ. ಹಿ. ಸಿ. ನ್ಯಾ ಉಡುಪಿ.